# ಜಾಣನ ಹಾಡು-ಪಾಡು



ರಮೇಶ್ ಅರವಿಂದ್ ನಿರ್ದೇಶನದ 'ಸುಂದರಾಂಗ ಜಾಣ' ಚಿತ್ರ ಬಿಡುಗಡೆಗೆ ಸಿದ್ಧವಾಗಿದೆ. ಅದಕ್ಕೆ ಮುನ್ನುಡಿಯ ರೂಪದಲ್ಲಿ ಚಿತ್ರದ ಗೀತೆಗಳು ಈಗ ಕೇಳುಗರಿಗೆ ಲಭ್ಯ. ಗಣೇಶ್ ಹಾಗೂ ಶಾನ್ವಿ ಶ್ರೀವಾಸ್ತವ ಜೋಡಿಯ ಈ ಸಿನಿಮಾ ತೆಲುಗಿನ ಚಿತ್ರವೊಂದರ ಕನ್ನಡ ರೂಪ.

ಸ್ವಂತಿಕೆಯ ಮೂಲಕ ಕನ್ನಡ ಚಿತ್ರರಂಗದಲ್ಲಿ ಗುರ್ತಿಸಿಕೊಂಡಿರುವ ಅಜನೀಶ್ ಲೋಕನಾಥ್, ಇದೇ ಮೊದಲ ಬಾರಿಗೆ ರೀಮೇಕ್ ಚಿತ್ರವೊಂದಕ್ಕೆ ಸಂಗೀತ ನೀಡಿದ್ದಾರೆ. ರಮೇಶ್‌ರಂಥ ಸೃಜನಶೀಲ ನಿರ್ದೇಶಕ ಇರುವುದು ಹಾಗೂ ಸಂಗೀತ ಸಂಯೋಜನೆಗೆ ಸ್ವಾತಂತ್ರ್ಯ ದೊರಕಿರುವುದರಿಂದ ಅಜನೀಶ್ ಖುಷಿಯಿಂದಲೇ ಕೆಲಸ ಮಾಡಿದ್ದಾರೆ. ಹಾಸ್ಯ ಚಿತ್ರವೊಂದಕ್ಕೆ ಸಂಗೀತ ಸಂಯೋಜಿಸುವ ಸವಾಲನ್ನು ಇಷ್ಟಪಟ್ಟು ಎದುರಿಸಿರುವ ಅವರು, ರೀಮೇಕ್ ಚಿತ್ರದಲ್ಲೂ ವಿಭಿನ್ನ ಸಂಗೀತ ನೀಡಲು ಪ್ರಯತ್ನಿಸಿದ್ದಾರಂತೆ. ಚಿತ್ರದ ನವಿರು ಪ್ರಸಂಗಗಳನ್ನು ಅಜನೀಶ್‌ರ ಸಂಗೀತ ಮತ್ತಷ್ಟು ಸೂಕ್ಷ್ಮಗೊಳಿಸಿದೆಯಂತೆ.

ಎಲ್.ಆರ್. ಈಶ್ವರಿ ಅವರ 'ದೂರದಿಂದ ಬಂದಂತ ಸುಂದರಾಂಗ ಜಾಣ' ಎಪ್ಪತ್ತು–ಎಂಬತ್ತರ ದಶಕದ ಜನಪ್ರಿಯ ಗೀತೆ. 'ಸಂಶಯಫಲ' ಚಿತ್ರದ ಈ ಗೀತೆ ಈಗಲೂ ಕಿರುತೆರೆಯ ರಿಯಾಲಿಟಿ ಶೋಗಳಲ್ಲಿ ಹಾಗೂ ಆರ್ಕೆಸ್ಟ್ರಾಗಳಲ್ಲಿ ಅನುರಣನಗೊಳ್ಳುತ್ತಿರುತ್ತದೆ. ಈ ಮಾದಕ ಗೀತೆಯನ್ನು 'ಸುಂದರಾಂಗ ಜಾಣ' ಚಿತ್ರದಲ್ಲೂ ಬಳಸಿಕೊಳ್ಳಲಾಗಿದೆಯಂತೆ.

ರಾಕ್‌ಲೈನ್ ವೆಂಕಟೇಶ್ ನಿರ್ಮಾಣದ ಈ ಚಿತ್ರದ ತಾರಾಗಣದಲ್ಲಿ ದೇವರಾಜ್, ರಂಗಾಯಣ ರಘು, ಸಾಧು ಕೋಕಿಲಾ, ರವಿಶಂಕರ್ ಮುಂತಾದವರಿದ್ದಾರೆ. ಮನೋಹರ್ ಜೋಷಿ ಛಾಯಾಗ್ರಹಣ, ಗುರುಪ್ರಸಾದ್ ಕಶ್ಯಪ್ ಸಂಭಾಷಣೆ ಚಿತ್ರಕ್ಕಿದೆ.



# ಸುಬ್ಬಿಯಾದ ಗೌರಿ!

ರಂಜನಿ ರಾಘವನ್ ಕಿರುತೆರೆಯ ಜನಪ್ರಿಯ ನಟಿಯರಲ್ಲಿ ಒಬ್ಬರು. ಅವರು ಮುಖ್ಯಪಾತ್ರದಲ್ಲಿ ನಟಿಸುತ್ತಿರುವ 'ಪುಟ್ಟಗೌರಿ ಮದುವೆ' 'ಕಲರ್ಸ್ ಕನ್ನಡ' ವಾಹಿನಿಯ ಜನಪ್ರಿಯ ಧಾರಾವಾಹಿಗಳಲ್ಲೊಂದು. ಈ ಧಾರಾವಾಹಿಯ ಪುಟ್ಟಗೌರಿಗೆ ಹಿರಿತೆರೆಯತ್ತಲೂ ಒಂದು ಕಣ್ಣು.

'ಪುಟ್ಟಗೌರಿ' ಪಾತ್ರದ ಜನಪ್ರಿಯತೆ ರಂಜನಿ ಅವರಿಗೆ ಸಿನಿಮಾ ಅವಕಾಶಗಳನ್ನು ಮನೆ ಬಾಗಿಲಿಗೆ ತಂದಿದೆಯಂತೆ. ಆದರೆ, ಈಗಾಗಲೇ ನಟಿಸುತ್ತಿರುವ ದೈನಿಕ ಧಾರಾವಾಹಿಯ ನಡುವೆ ಸಿನಿಮಾ ತೂಗಿಸಿಕೊಂಡು ಕಷ್ಟ ಎಂದು ಅವಕಾಶಗಳನ್ನು ಒಲ್ಲೆ ಎಂದಿದ್ದರಂತೆ. ಸಾಂಪ್ರದಾಯಿಕ ಕುಟುಂಬದ ಹಿನ್ನೆಲೆ ಕೂಡ ಅವರ ಸಿನಿಮಾ ಪ್ರೀತಿಯನ್ನು ಉತ್ತೇಜಿಸುವಂತಿಲ್ಲ. ಹೀಗೆ 'ಒಲ್ಲೆ' ಎನ್ನುತ್ತಲೇ 'ರಾಜಹಂಸ' ಎನ್ನುವ ಚಿತ್ರವೊಂದರಲ್ಲಿ ರಂಜನಿ ಅಭಿನಯಿಸಿದ್ದಾರೆ. ಆದರೆ, ಕಥೆ ಕೇಳಿದ ಮೇಲೆ, ತಮ್ಮ ಪಾತ್ರದ ಕಿಮ್ಮತ್ತು ಅರ್ಥವಾದ ಮೇಲೆ ಅವರು ನಿರ್ಧಾರ ಬದಲಿಸಿದ್ದಾರೆ.

'ರಾಜಹಂಸ' ನಂತರ ಪಾತ್ರದ ಕಾರಣದಿಂದಲೇ ರಂಜನಿ ಒಪ್ಪಿಕೊಂಡಿರುವ ಮತ್ತೊಂದು ಸಿನಿಮಾ 'ಸುಬ್ಬ ಸುಬ್ಬಿ'. ಒಳ್ಳೆಯ ಚಿತ್ರತಂಡ ಹಾಗೂ ಅವಕಾಶ ಬಿಟ್ಟುಕೊಡುವುದು ಸರಿಯಲ್ಲ ಎನ್ನುವ ಕಾರಣಕ್ಕೆ ಅವರು ಸುಬ್ಬಿಯ ಪಾತ್ರ ಒಪ್ಪಿಕೊಂಡಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಸಾ.ರಾ. ಗೋವಿಂದು ಅವರ ಪುತ್ರ ಅನೂಪ್ 'ಸುಬ್ಬ'ನ ಪಾತ್ರದಲ್ಲಿ ನಟಿಸುತ್ತಿದ್ದಾರೆ.

ಚರಣ್ ರಾಜ್ 'ಸುಬ್ಬ ಸುಬ್ಬಿ'ಯ ನಿರ್ದೇಶಕ. ಇದೇ ಮೊದಲ ಬಾರಿಗೆ ಚಿತ್ರವೊಂದನ್ನು ನಿರ್ದೇಶಿಸುತ್ತಿರುವ ಚರಣ್, ಯುವ ಪ್ರೇಮಿಗಳ ಕಥನವೊಂದನ್ನು ಭಿನ್ನವಾಗಿ ನಿರೂಪಿಸುತ್ತಿದ್ದಾರಂತೆ. ಅರ್ಜುನ್ ಜನ್ಯ ಸಂಗೀತ ಹಾಗೂ ಪ್ರಭಾಕರ್ ರೆಡ್ಡಿ ಛಾಯಾಗ್ರಹಣ ಚಿತ್ರಕ್ಕಿದೆ.

■ ರಘು